# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)

ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು – 560 001

# KARNATAKA RURAL INFRASTRUCTURE DEVELOPMENT LTD.,

( A Government of Karnataka Undertaking)

**CHINNASWAMY STADIUM, RAJBHAVAN ROAD, BENGALURU - 560 001.**




**Renovated House of Sir. M. Vishweswariah at Muddenahally by KRIDL**

## 36 ನೇ ವಾರ್ಷಿಕ ವರದಿ 2009–2010

## 36th ANNUAL REPORT 2009-2010

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

ನಿಗಮವೂ ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ (ರೂ. ಕೋಟಿಗಳಲ್ಲಿ)

## Performance of the Company since inception
## Turn over (Rs. in Core)



ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು

ನಿಗಮವೂ ಅಸ್ತಿತ್ವಗೊಂಡ ವರ್ಷದಿಂದ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ (ರೂ. ಕೋಟಿಗಳಲ್ಲಿ)

## Performance of the Company since inception
## NET PROFIT/LOSS (Rs. In Core)



# CERTIFICATE OF CHANGE OF COMPANY NAME

## FROM KLAC TO KRIDL

## WITH EFFECT FROM 06-08-2009

GOVERNMENT OF INDIA - MINISTRY OF CORPORATE AFFAIRS
Registrar of Companies, Karnataka

Fresh Certificate of Incorporation Consequent upon Change of Name

Corporate Identity Number : U75112KA1974SGC002613

In the matter of M/s KARNATAKA LAND ARMY CORPORATION LIMITED

I hereby certify that KARNATAKA LAND ARMY CORPORATION LIMITED which was originally incorporated on Eighth day of August Nineteen Hundred Seventy Four under the Companies Act, 1956 (No. 1 of 1956) as KARNATAKA LAND ARMY CORPORATION LIMITED having duly passed the necessary resolution in terms of Section 21 of the Companies Act, 1956 and the approval of the Central Government signified in writing having been accorded thereto under Section 21 of the Companies Act, 1956, read with Government of India, Department of Company Affairs, New Delhi, Notification No. G.S.R 507 (E) dated 24/06/1985 vide SRN A65474454 dated 06/08/2009 the name of the said company is this day changed to KARNATAKA RURAL INFRASTRUCTURE DEVELOPMENT LIMITED and this Certificate is issued pursuant to Section 23(1) of the said Act.

Given under my hand at Bangalore this Sixth day of August Two Thousand Nine.

(GEETHA MAHALAKSHMI K)

सहायक कम्पनी रजिस्ट्रार / Assistant Registrar of Companies

करनाटका

Karnataka

कम्पनी रजिस्ट्रार के कार्यालय अभिलेख में उपलब्ध पत्राचार का पता :

Mailing Address as per record available in Registrar of Companies office:

KARNATAKA RURAL INFRASTRUCTURE DEVELOPMENT LIMITED
CHINNASWAMY STADIUMNORTH END RAJBHAVAN ROAD, BANGALORE,
BANGALORE - 560001,
Karnataka, INDIA

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

## ಚಿನ್ನಸ್ವಾಮಿ ಕ್ರೀಡಾಂಗಣ, ರಾಜ ಭವನ ರಸ್ತೆ, ಬೆಂಗಳೂರು 560 001


| ಕ್ರ.ಸಂ. | ವಿಷಯಸೂಚಿ | ಪುಟ ಸಂಖ್ಯೆ |
|---|---|---|
| 1. | ಸದಸ್ಯರಿಗೆ ನೀಡಿದ ನೋಟಿಸ್ | 2 |
| 2. | 2009–2010 ನೇ ಸಾಲಿನ ನಿರ್ದೇಶಕರ ಪಟ್ಟಿ | 4 |
| 3. | 2009–2010ನೇ ಸಾಲಿನ ನಿರ್ದೇಶಕರ ವರದಿ | 5 |
| 4. | ಮಹಾಲೇಖಪಾಲರ ವರದಿ | 12 |
| 5. | ಲೆಕ್ಕ ಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ | 13 |
| 6. | ಲೆಕ್ಕ ಪರಿಶೋಧಕರ ವರದಿ | 17 |
| 7. | ಆಯವ್ಯಯ ಪತ್ರ (ಬ್ಯಾಲೆನ್ಸ್ ಶೀಟ್) | 24 |
| 8. | ಲಾಭ ಮತ್ತು ನಷ್ಟದ ತಃಖ್ತೆ | 26 |
| 9. | ಆಯವ್ಯಯ ಮತ್ತು ಲಾಭದ ನಷ್ಟದ ತಃಖ್ತೆಯ ಅನುಸೂಚಿಗಳು | 30 |

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## ಸದಸ್ಯರಿಗೆ ಸೂಚನಾ ಪತ್ರ
## 36ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆ

ನಂ.ಕೆಆರ್‌ಐಡಿಎಲ್.ಎಡಿಎಂ/36ನೇ ಎಜಿಎಂ/ 2010-11/ ದಿನಾಂಕ: 14ನೇ ಡಿಸೆಂಬರ್ 2010

36ನೇ ವಾರ್ಷಿಕ ಸಾಮಾನ್ಯ ಸಭೆಯನ್ನು 24ನೇ ಡಿಸೆಂಬರ್ 2010ರ ಶುಕ್ರವಾರ ಅಪರಾಹ್ನ 5.00 ಗಂಟೆಗೆ ಎಂ. ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು-560 001, ರಲ್ಲಿರುವ ಕಂಪನಿಯ ಕೇಂದ್ರ ಕಛೇರಿಯಲ್ಲಿ ಈ ಕೆಳಗಿನ ಸಾಮಾನ್ಯ ವಿಷಯಗಳ ಚರ್ಚೆಗಾಗಿ ಕರೆಯಲಾಗಿದೆ ಎಂದು ಈ ಮೂಲಕ ಸೂಚಿಸಲಾಗಿದೆ.

**ಸಾಮಾನ್ಯ ವ್ಯವಹಾರಗಳು:-**

1) 31ನೇ ಮಾರ್ಚ್ 2010ರ ಆಯವ್ಯಯ ಪತ್ರ, ಲಾಭ ಮತ್ತು ನಷ್ಟದ ಲೆಕ್ಕ, ನಿರ್ದೇಶಕರ ವರದಿ, ಲೆಕ್ಕ ಪರಿಶೋಧಕರ ವರದಿ ಮತ್ತು ಭಾರತ ಸರ್ಕಾರದ ಆಡಿಟರ್ ಜನರಲ್‌ರ ಟೀಕೆ-ಟಿಪ್ಪಣಿಗಳನ್ನು ಕಂಪನ ಕಾಯ್ದೆ 1956 ಅಧಿನಿಯಮ 619(4)ರ ಪ್ರಕಾರ ತಿಳಿಯಲು ಮತ್ತು ಅದನ್ನು ಅಂಗೀಕರಿಸಿ ಕಾರ್ಯರೂಪಕ್ಕೆ ತರಲು ನಿರ್ಧರಿಸಲಾಗಿದೆ.
2) ಲಾಭಾಂಶ ಘೋಷಣೆ.
3) ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲಕರು ಇದರಿಂದ ನೇಮಕಗೊಂಡ ಲೆಕ್ಕ ಪರಿಶೋಧಕರ ಸಂಭಾವನೆಯನ್ನು ನಿಗದಿಪಡಿಸುವ ಬಗ್ಗೆ.

ನಿರ್ದೇಶಕ ಮಂಡಳಿ ಆದೇಶದ ಮೇರೆಗೆ

ಸಹಿ/-

ವ್ಯವಸ್ಥಾಪಕ ನಿರ್ದೇಶಕರು.

ಬೆಂಗಳೂರು

ದಿನಾಂಕ : **14-12-2010**

---

**ಸೂಚನೆ:**

ಸಭೆಗೆ ಹಾಜರಾಗಲು ಅರ್ಹರಾದ ಸದಸ್ಯರು ತಮ್ಮ ಅನುಪಸ್ಥಿತಿಯಲ್ಲಿ ಒಬ್ಬ ಪ್ರಾಕ್ಸಿಯನ್ನು ನೇಮಿಸಬಹುದು. ಅವರು ನಿಗಮದ ಸದಸ್ಯರಾಗದಿದ್ದರೂ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಲು ಮಾತ್ರ ಅರ್ಹರು.

## ಯಥಾ ಪ್ರತಿಯನ್ನು

1. ಶ್ರೀ ಎಸ್.ಐ. ಚಿಕ್ಕನಗೌಡ್ರ, ಅಧ್ಯಕ್ಷರು, ಕೆಆರ್‌ಐಡಿಎಲ್., ಬೆಂಗಳೂರು.

2. ಶ್ರೀ. ಪಿ. ರವಿಶಂಕರ್., ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

3. ಶ್ರೀ. ಅಶೋಕ್‌ಕುಮಾರ್ ಸಿಂಗ್, ಭಾ.ಅ.ಸೇ., ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಬೆಂಗಳೂರು.

4. ಶ್ರೀ. ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ., ಆಯುಕ್ತರು. ಸಮಾಜ ಕಲ್ಯಾಣ ಇಲಾಖೆ.

5. ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ (ಆಯವ್ಯಯ ಸಂಪನ್ಮೂಲ), (ರಾಜ್ಯಪಾಲರ ಪ್ರತಿನಿಧಿ,) ಬೆಂಗಳೂರು.

## 2009-10ನೇ ಸಾಲಿನಲ್ಲಿ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್‌ಡೆವೆಲೆಪ್‌ಮೆಂಟ್ ಲಿಮಿಟೆಡ್ ಇಲ್ಲಿಯ ಆಡಳಿತ ಮಂಡಳಿ ನಿರ್ದೇಶಕರುಗಳ ಪಟ್ಟಿ,

### ಅಧ್ಯಕ್ಷರು

| | |
|---|---|
| **ಶ್ರೀಮತಿ. ತಾರಾ ಅಜಯ್ ಸಿಂಗ್, ಭಾ.ಆ.ಸೇ.,**<br>(ದಿ:11-06-2008 ರಿಂದ ದಿ:18-06-2009<br>**(ಶ್ರೀ.ಕೆ.ಜೈರಾಜ್, ಭಾ.ಆ.ಸೇ., ರವರ ಸ್ಥಾನದಲ್ಲಿ)** | **ಶ್ರೀ ಪಿ.ರವಿಕುಮಾರ್, ಭಾ.ಆ.ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ ಮತ್ತು ಅಧ್ಯಕ್ಷರು (ಪ್ರಭಾರ), ಕೆಆರ್‌ಐಡಿಎಲ್.<br>(ದಿ: 18-06-2009 ರಿಂದ 20-04-2010 ಇಲ್ಲಿಯವರೆಗೆ) **ಶ್ರೀಮತಿ ತಾರ ಅಜಯ್‌ಸಿಂಗ್, ಭಾ.ಆ.ಸೇ** |

### ವ್ಯವಸ್ಥಾಪಕ ನಿರ್ದೇಶಕರು

**ಶ್ರೀ. ಅಶೋಕ್ ಕುಮಾರ್ ಸಿಂಗ್ ಭಾ.ಅ.ಸೇ.,**
(ದಿ:23-07-2008 ರಿಂದ ಇಲ್ಲಿಯವರೆಗೆ)
**(ಶ್ರೀ.ಸಿ.ಎಂ.ಶೀರೋಳ್ ಭಾ.ಆ.ಸೇ., ಇವರ ಸ್ಥಾನದಲ್ಲಿ)**

### ನಿರ್ದೇಶಕರುಗಳು

| | |
|---|---|
| **ಡಾ॥ಬಾಬುರಾವ್ ಮುಡಬಿ, ಭಾ.ಆ.ಸೇ.,**<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು<br>(ದಿ:22-08-2007 ರಿಂದ ದಿ:18-06-2009)<br>**(ಶ್ರೀ.ಯೋಗೇಂದ್ರ ತ್ರಿಪಾಠಿ, ಭಾ.ಆ.ಸೇ., ರವರ ಸ್ಥಾನದಲ್ಲಿ)** | **ಶ್ರೀ. ಎನ್. ಮಂಜುನಾಥ್ ಪ್ರಸಾದ್, ಭಾ.ಆ.ಸೇ.,**<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ,<br>ಬಹುಮಹಡಿಗಳ ಕಟ್ಟಡ, ಬೆಂಗಳೂರು<br>(ದಿ:18-06-2009 ರಿಂದ ಇಲ್ಲಿಯವರೆಗೆ)<br>**(ಡಾ॥ಬಾಬುರಾವ್ ಮುಡಬಿ, ಭಾ.ಆ.ಸೇ., ರವರ ಸ್ಥಾನದಲ್ಲಿ)** |
| **ಶ್ರೀ.ಎಂ.ಆರ್.ಕಾಂಬ್ಳೆ, ಭಾ.ಆ.ಸೇ.,**<br>ಸರ್ಕಾರದ ಕಾರ್ಯದರ್ಶಿಗಳು,<br>ಜಲ ಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ,<br>ವಿಕಾಸ ಸೌಧ, ಬೆಂಗಳೂರು.<br>(ದಿ:19-12-2006 ರಿಂದ 28-06-2010) (ಪ್ರಸಕ್ತ ಶ್ರೀ.ಎಂ.ಆರ್.ಕಾಂಬ್ಳೆ ಇವರು ನೇಮಕಾತಿ ಸಮಯದಲ್ಲಿ ನಿರ್ದೇಶಕರಾಗಿದ್ದರು, ಈಗ ಹಣಕಾಸು ಇಲಾಖೆಯ ಕಾರ್ಯದರ್ಶಿಯಾಗಿರುತ್ತಾರೆ)<br>**(ಶ್ರೀ ಡಿ.ಎನ್. ನರಸಿಂಹರಾಜು, ಭಾ.ಆ.ಸೇ.,ಇವರ ಸ್ಥಾನದಲ್ಲಿ)** | **ಶ್ರೀ.ಆರ್.ಪಿ.ಕುಲಕರ್ಣಿ**<br>ಮುಖ್ಯ ಅಭಿಯಂತರರು,<br>ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ.<br>ಶೇಷಾದ್ರಿಪುರಂ, ಬೆಂಗಳೂರು.<br>(ದಿ:17-12-2008 ರಿಂದ 28-06-2010)<br>**(ಶ್ರೀ.ಹೆಚ್.ಎಸ್. ಪ್ರಕಾಶ್ ಕುಮಾರ್ ರವರ ಸ್ಥಾನದಲ್ಲಿ)** |
| **ಶ್ರೀ. ಅನಿಲ್ ಕುಮಾರ್ ಜಾ, ಭಾ.ಆ.ಸೇ.,**<br>ಸರ್ಕಾರದ ಕಾರ್ಯದರ್ಶಿಗಳು,<br>ಹಣಕಾಸು ಇಲಾಖೆ (ವೆಚ್ಚ).<br>ವಿಧಾನ ಸೌಧ, ಬೆಂಗಳೂರು.<br>(ದಿ: 01-04-2008 ರಿಂದ ಇಲ್ಲಿಯವರೆಗೆ)<br>**(ಶ್ರೀ. ಎಂ.ಆರ್. ಕಾಂಬ್ಳೆ, ಭಾ.ಆ.ಸೇ ಇವರ ಸ್ಥಾನದಲ್ಲಿ)** | **ಶ್ರೀ ಆರ್.ಎಸ್. ಘೋಂಡೆ,**<br>ವಿಶೇಷಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,<br>ಲೋಕೋಪಯೋಗಿ ಇಲಾಖೆ (ಹಣಕಾಸು ವಿಭಾಗ).<br>ವಿಧಾನ ಸೌಧ, ಬೆಂಗಳೂರು.<br>(ದಿ: 17-02-2009 ರಿಂದ ಇಲ್ಲಿಯವರೆಗೆ) |
| **ಶ್ರೀ. ಲಕ್ಷ್ಮಣ್ ರಾವ್ ಪೇಶ್ವೆ,**<br>ಸರ್ಕಾರದ ಕಾರ್ಯದರ್ಶಿಗಳು,<br>ಲೋಕೋಪಯೋಗಿ ಇಲಾಖೆ,<br>(ದಿ:19-01-2009 ರಿಂದ ಇಲ್ಲಿಯವರೆಗೆ)<br>**(ಶ್ರೀ.ಟಿ.ಸುಕುಮಾರ್ ಇವರ ಸ್ಥಾನದಲ್ಲಿ)** | **ಶ್ರೀ ಪಿ.ರವಿಕುಮಾರ್, ಭಾ.ಆ.ಸೇ.,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಗ್ರಾ.ಅ. ಮತ್ತು ಪಂ. ರಾಜ್ ಇಲಾಖೆ<br>(ದಿ: 17-12-2008 ರಿಂದ ಇಲ್ಲಿಯವರೆಗೆ)<br>**(ಶ್ರೀ.ಎ.ಪಿ. ಜೋಷಿ, ಭಾ.ಆ.ಸೇ., ಇವರ ಸ್ಥಾನದಲ್ಲಿ)** |

# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
# ನಿರ್ದೇಶಕರ ವರದಿ

ಗೆ

ಸದಸ್ಯರುಗಳಿಗೆ,

2010ರ ಮಾರ್ಚ್ 31ಕ್ಕೆ ಕೊನೆಯಾಗುವ ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯೊಂದಿಗೆ 36ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿರ್ದೇಶಕರುಗಳಿಗೆ ಸಂತಸವಾಗಿದೆ.

**ಅವಲೋಕನ :**

ಕಂಪನಿಯು ಪ್ರಸಕ್ತ ಸಾಲಿನಲ್ಲಿ ಇತಿಹಾಸದಲ್ಲೇ ಅತಿ ಹೆಚ್ಚು ವಹಿವಾಟಾದ ರೂ.380.21 ಕೋಟಿ ಸಾಧನೆ ಮಾಡಿದೆ. ಇದು ಕಳೆದ ವರ್ಷದ ವಹಿವಾಟದ ರೂ.344.86 ಕೋಟಿಗಳಿಗಿಂತ ಶೇಕಡ 9.30 ರಷ್ಟು ಹೆಚ್ಚಾಗಿರುತ್ತದೆ. ಕಂಪನಯು ರೂ.16.78 ಕೋಟಿ ನಿವ್ವಳ ಲಾಭ ಮಾಡಿದ್ದು, ಇದು ರೂ.8.17 ಕೋಟಿ ಆದಾಯ ತೆರಿಗೆ, ರೂ.3.60 ಕೋಟಿ ಬಾಕಿ ಸಂಬಳ, ಭತ್ಯೆ ಮತ್ತು ರೂ.8.17 ಕೋಟಿ ಬಾಕಿ ಸಾಲದ ಮನ್ನಾಗಳು ಮಾಡಿದ ನಂತರ ಗಳಿಸಿರುವುದಾಗಿದೆ. ಇದಲ್ಲದೆ ಕಂಪನಿಯು ತನ್ನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ರೂ.1.22 ಕೋಟಿಯನ್ನು ಸರ್ಕಾರಕ್ಕೆ ಡಿವಿಡೆಂಟ್ ಆಗಿ ಲಾಭಾಂಶದಲ್ಲಿ ಘೋಷಣೆ ಮಾಡಿದೆ.

ಕಂಪನಿಯು ಪ್ರಸಕ್ತ ಸಾಲಿನಲ್ಲಿ ಆಸ್ತಿ ಶೇಕಡ 47 ರಷ್ಟಿ ಹೆಚ್ಚಾಗಿದ್ದು, ರೂ.45.25 ಕೋಟಿಗಳಿಂದ ರೂ.66.48 ಕೋಟಿಗಳಿಗೆ ತಲುಪಿದೆ. ಈ ಹೆಚ್ಚಳಕ್ಕೆ ಮುಖ್ಯ ಕಾರಣಗಳೆಂದರೆ, ಕಂಪನಿಯು ಸಾಧಿಸಿರುವ ಲಾಭಾಂಶ ಹಾಗೂ ಸಿಂಗಸಂದ್ರದಲ್ಲಿರುವ ನಿವೇಶನದ ಮೌಲ್ಯವನ್ನು ರೂ.5.88 ಕೋಟಿಗಳಷ್ಟು ಹೆಚ್ಚು ಮರು ಮೌಲ್ಯ ಮಾಪನ ಮಾಡಿರುವುದು.

ತಾರೀಖು 31/03/2010ರ ಅಂತ್ಯದಲ್ಲಿ ಪೂರ್ಣಗೊಳಿಸಿ ಹೊಂದಾಣಿಕೆ ಮಾಡದೆ ಇದ್ದ ಕಾಮಗಾರಿಗಳ ಮೊತ್ತ ರೂ.728.08 ಕೋಟಿ ಇದ್ದು ಕೆಳೆದ ಸಾಲಿನಲ್ಲಿ ರೂ.574.00 ಕೋಟಿ ಇತ್ತು. ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ.380.08 ಕೋಟಿಗೆ ಅನುಗುಣವಾಗಿ ರೂ.226.10 ಕೋಟಿಗಳನ್ನು ಅಂತಿಮ ಬಿಲ್ಲುಗಳನ್ನು ಹೊಂದಾಣಿಕೆ ಮಾಡಿಕೊಂಡು, ಹಿಂದಿನ ವರ್ಷದಲ್ಲಿ ಬಾರದೇ ಇರುವ ಸಾಲಗಳ ಮೊತ್ತ ರೂ.4.07 ಕೋಟಿಗೆ ಬದಲಾಗಿದೆ ರೂ.2.82 ಕೋಟಿಗಳು ಹೊಂದಾಣಿಕೆಯಾಗಿದೆ. ಹಿಂದಿನ ಸಾಲಿನಲ್ಲಿ ರೂ.440.52 ಲಕ್ಷಗಳಿಗಿತ್ತು ಹಾಗೂ ಇದರಿಂದ ರೂ.76.19 ಲಕ್ಷಗಳಷ್ಟು ಆದಾಯವನ್ನು ಗಳಿಸಿರುತ್ತದೆ.

## ಆರ್ಥಿಕ ಫಲಿತಾಂಶಗಳು

ವರದಿಯ ವರ್ಷದಲ್ಲಿ ಕಂಪನಿಯ ಆರ್ಥಿಕ ಫಲಿತಾಂಶಗಳು ಈ ಮುಂದಿನಂತಿವೆ:

(ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | 2009–10 | 2008–09 | 2007–08 |
|---|---|---|---|
| ಮಾಡಲಾದ ಕಾಮಗಾರಿಗಳ ಮೌಲ್ಯ | **38020.76** | 34486.21 | 20506.15 |
| ಇತರೆ ಆದಾಯ | **2226.81** | 1268.98 | 642.81 |
| ಒಟ್ಟು ಆದಾಯ | **40247.57** | 35755.19 | 21148.96 |
| ನೇರ ಕಾಮಗಾರಿಗಳ ವೆಚ್ಚ | **33994.75** | 29995.05 | 19315.70 |
| ಇತರೆ ವೆಚ್ಚಗಳು | **3986.26** | **3429.48** | **2634.05** |
| ಸವಕಳಿಗೆ ಮುನ್ನ ವರ್ಷದ ಲಾಭ/ನಷ್ಟ | **2266.56** | 2330.66 | (800.76) |
| ಸವಕಳಿ | **38.07** | 44.05 | 42.80 |
| ಸವಕಳಿಯ ನಂತರ ವರ್ಷದ ಲಾಭ/ನಷ್ಟ | **2228.48** | 2286.61 | 843.58 |
| ಅವಧಿಪೂರ್ವ ಹೊಂದಾಣಿಕೆಗಳು (ಸಿಆರ್) | **83.52** | 536.36 | 103.68 |
| ತೆರಿಗೆ ನಿರ್ಧರಣೆಯ ಮೊದಲಿನ ಲಾಭ/ನಷ್ಟ | **2312.00** | 2822.97 | 881.21 |
| ಆದಾಯ ತೆರಿಗೆ (ಹಿಂದಿನ ವರ್ಷ) | **803.71** | 704.65 | 15.07 |
| ***ತೆರಿಗೆ ನಂತರದ ಆದರೆ ಮುಂದೂಡಲಾದ ತೆರಿಗೆಗೆ ಮೊದಲಿನ ಲಾಭ/ನಷ್ಟ*** | **1508.29** | **2118.32** | **(896.28)** |
| *ಸವಲತ್ತುಗಳ ಮೇಲಿನ ತೆರಿಗೆ (ಡಿಆರ್)* | *0.00* | *7.40* | *8.30* |
| *ಮುಂದೂಡಲಾದ ಮತ್ತು ಇತರ ತೆರಿಗೆಗಳ ಜಮೆ (ನಿವ್ವಳ) (ಸಿಆರ್)* | *169.75* | *0.38* | *18.62* |
| *ತೆರಿಗೆ ನಿರ್ಧರಣೆ ನಂತರದ ಲಾಭ/ನಷ್ಟ* | *1678.04* | *2110.54* | *(923.20)* |

**ಕಾರ್ಯನಿರ್ವಹಣೆ :**

ಕಂಪನಿಯ ಆಡಳಿತ ಮಂಡಳಿಯು ಸರ್ಕಾರದ ಹಲವಾರು ಇಲಾಖೆಗಳನ್ನು ನಿರಂತರವಾಗಿ ಸಂಪರ್ಕಿಸಿ ಕಂಪನಿಯ ವಹಿವಾಟನ್ನು ಹೆಚ್ಚಿಸಲು ಅನುಕೂಲವಾಗಲು ಕಾಮಗಾರಿಗಳನ್ನು ವಹಿಸಲು ಕೋರಿಕೊಳ್ಳಲಾಗಿರುತ್ತದೆ. ನಿಮ್ಮ ಕಂಪೆನಿಯು 2006–07ನೇ ಹಣಕಾಸಿನ ವರ್ಷದಲ್ಲಿ ಕನ್ಸಲ್‌ಟೆನ್ಸಿ ವಿಭಾಗವನ್ನು ಪ್ರಾರಂಭಿಸಿದ್ದು, ಇದರ ಮೂಲಕ ಟೆಕ್ನಿಕಲ್ ಕನ್ಸಲ್‌ಟೆನ್ಸಿ ಸೇವೆಗಳನ್ನು ಅಗತ್ಯವಿರುವ ಇಲಾಖೆಗಳಿಗೆ ಒದಗಿಸುತ್ತಾ ಬಂದಿದೆ. 2009–10ನೇ ಸಾಲಿನಲ್ಲಿ ಕಂಪೆನಿಯು ಕನ್ಸಲ್‌ಟೆನ್ಸಿ ವಿಭಾಗದ ಮುಖಾಂತರ ಜಲಸಂವರ್ಧನ ಇಲಾಖೆಯ ಕಾಮಗಾರಿಗಳನ್ನು 4 ಜಿಲ್ಲೆಗಳಲ್ಲಿ 754 ಕೆರೆಗಳ ನವೀಕರಣ/ದುರಸ್ಥಿ/ಹೊಳೆತ್ತುವ ಕೆಲಸಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡು, 25 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸುವ ಗುರಿ ಹೊಂದಿತ್ತು. ಕಂಪೆನಿಯು ಈ ಯೋಜನೆಯ ಅಡಿಯಲ್ಲಿ ಕನ್ಸಲ್‌ಟೆನ್ಸಿ ಫೀ ಆಗಿ ರೂ.2.80 ಕೋಟಿಗಳಲ್ಲಿ, ರೂ.50.00 ಲಕ್ಷಗಳನ್ನು ಮುಂಗಡವಾಗಿ ಪಡೆದಿರುತ್ತದೆ. ಹಿಂದಿನ ಸಾಲಿನಲ್ಲಿ ಕಂಪೆನಿಯು ರೂ.69.57 ಲಕ್ಷಗಳಿಗೆ ಬದಲಾಗಿ ಪ್ರಸಕ್ತ ಸಾಲಿನಲ್ಲಿ ರೂ.101.95 ಲಕ್ಷಗಳ ಕನ್ಸಲ್‌ಟೆನ್ಸಿ ಮೊತ್ತವನ್ನು ಪಡೆದಿರುತ್ತದೆ. ಕಂಪನಿಯು ಕನ್ಸಲ್‌ಟೆನ್ಸಿ ಸೇವೆಯ ಪ್ರಾರಂಭದಿಂದ ಇದುವರೆಗೂ ರೂ.325.63 ಲಕ್ಷಗಳಷ್ಟು ಗಳಿಸಿರುತ್ತದೆ.

**ಕಂಪನಿಯ ವಹಿವಾಟು :**

ಕಂಪನಿಯ ಹಿಂದಿನ 2 ವರ್ಷಗಳಲ್ಲಿ ಲಾಭದ ಆದಾಯ ಮಟ್ಟವು ಹೆಚ್ಚುವರಿಯಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

| ವಿವರ | 31.3.2010 | 31.3.2009 | 31.3.2008 | 31.3.2007 | 31.3.2006 | 31.3.2005 |
|---|---|---|---|---|---|---|
| ಒಟ್ಟು ಆದಾಯ | 402.46 | 357.55 | 211.49 | 224.06 | 215.34 | 247.32 |
| ನೇರ ಕಾಮಗಾರಿ ವೆಚ್ಚ | 339.95 | 299.95 | 193.31 | 200.50 | 199.28 | 227.38 |
| ಕಾರ್ಯಾಚರಣೆಯ ಲಾಭಾಂಶ | 62.51 | 57.60 | 18.18 | 23.56 | 16.06 | 19.94 |
| ಶೇಕಡವಾರು ಕಾರ್ಯಾಚರಣೆ | 15.53% | 16.11% | 8.59% | 10.51% | 7.45% | 8.06% |

2008-09 ಮತ್ತು 2009-10ನೇ ಸಾಲಿನಲ್ಲಿ ಶೇಕಡವಾರು ಪರಿಣಾಮ ಲಾಭದಲ್ಲಿನ ಅಂದಾಜು ಶೇಕಡ 14.01 ಮತ್ತು ಶೇಕಡ 13.80 ನಿಗದಿತ ಠೇವಣಿಯ ಮೇಲೆ ಬಂದಿರುವ ಬಡ್ಡಿಯಲ್ಲಿ ಆದಾಯವು ಗಳಿಸಿರುತ್ತದೆ. 2009-10ನೇ ಸಾಲಿನಲ್ಲಿ ಕೆ.ಆರ್.ಐ.ಡಿ.ಎಲ್ ಚಾರ್ಜ್‌ನ, ಶೇಕಡ 10 ರಿಂದ 5ಕ್ಕೆ ಇಳಿಸಿದ್ದರಿಂದ ಲಾಭಾಂಶವು ಹಿಂದಿನ ಸಾಲಿಗಿಂತ ಶೇಕಡವಾರು 0.23 ಗಳಷ್ಟು ಕಡಿಮೆಯಾಗಿರುತ್ತದೆ.

**ಹಣಕಾಸು ಸ್ಥಿತಿ :**

ಕಂಪನಿಯ ಆರ್ಥಿಕ ಸ್ಥಿತಿಯನ್ನು ಈ ಮುಂದಿನ ಅಂಕಿಅಂಶಗಳು ವ್ಯಕ್ತಪಡಿಸುತ್ತದೆ:

(ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | 2009-10 | 2008-09 | 2007-08 |
|---|---|---|---|
| ಸಂದಾಯ ಮಾಡಿದ ಈಕ್ವಿಟಿ ಬಂಡವಾಳ | 1225.00 | 1225.00 | 1225.00 |
| ಮೀಸಲು ಮತ್ತು ನಿಧಿಗಳು | 5422.94 | 3299.98 | 2.27 |
| ಪಡೆದ ಸಾಲಗಳು | 0.00 | 0.00 | 446.00 |
| ಅನಿಶ್ಚಿತ ಸಾಲ: ಹುಡ್ಕೊ | 7215.51 | 8467.45 | 9713.34 |
| ಮುಂದೂಡಲಾದ ತೆರಿಗೆ ಹೊಣೆಗಾರಿಕೆ | 0.00 | 32.85 | 32.47 |
| ಪ್ರಸಕ್ತ ಹೊಣೆಗಾರಿಕೆಗಳು ಮತ್ತು ಉಪಬಂಧಗಳು ತೆರಿಗೆ ಹೊಣೆಗಾರಿಕೆ | 113161.88 | 85888.55 | 94247.88 |
| **ಒಟ್ಟು** | **127025.33** | **98913.82** | **105666.96** |
| **ನಿವ್ವಳ ಸ್ಥಿರ ಆಸ್ತಿಗಳು** | **3464.22** | **2876.49** | **405.17** |
| ಪ್ರಚಲಿತ ಆಸ್ತಿಗಳು | 36673.24 | 23657.75 | 23227.44 |
| ಸಾಲ ಮತ್ತು ಮುಂಗಡಗಳು | 14079.73 | 14979.19 | 20997.58 |
| ಕಾಮಗಾರಿಗಳ ಮೌಲ್ಯ,(ಹೊಂದಾಣಿಕೆಗೆ ಮುನ್ನ) | 72808.14 | 57400.39 | 59723.31 |
| ಲಾಭ ಮತ್ತು ನಷ್ಟದ ಲೆಕ್ಕ | 0.00 | 0.00 | 1313.46 |
| **ಒಟ್ಟು** | **127025.33** | **98913.82** | **105666.96** |
| **ನಿವ್ವಳ ಆಸ್ತಿ** | **6647.94** | **4524.98** | **(-) 86.19** |

**ಷೇರು ಬಂಡವಾಳ :**

ಕಂಪನಿಯ ಅಧಿಕೃತ ಬಂಡವಾಳ 2010ರ ಮಾರ್ಚ್ 31ರ ವೇಳೆಗೆ 1500 ಲಕ್ಷ ರೂ.ಗಳು ಮತ್ತು ಸಂದಾಯ ಮಾಡಿದ ಬಂಡವಾಳ 1225 ಲಕ್ಷ ರೂ.ಗಳು.

**ಸ್ಥಿರ ಠೇವಣಿಗಳು :**

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 58ಎ ಅಡಿ ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿ ಅಂಗೀಕರಿಸಿಲ್ಲ.

**ಗುಣಮಟ್ಟ :**

ಕಂಪನಿಯು ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸುವತ್ತ ಹೆಚ್ಚಿನ ಗಮನ ನೀಡುವುದನ್ನು ಮುಂದುವರೆಸಿದೆ ಹಾಗೂ ಕೆಲಸಗಳನ್ನು ಸಾಮಾನ್ಯವಾಗಿ ವೇಳಾಪಟ್ಟಿ ಮಿತಿಯೊಳಗೆ ನಿರ್ವಹಿಸಲಾಗುತ್ತದೆ. ಸ್ಥಳೀಯ ಇಂಜಿನಿಯರಿಂಗ್ ಕಾಲೇಜುಗಳಿಂದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರಮಾಣೀಕರಿಸಲು ವಲಯವಾರು ಟೆಂಡರ್ ಮುಖಾಂತರ 3ನೇ ವ್ಯಕ್ತಿಗಳಿಂದ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಲೆಕ್ಕಪರಿಶೋಧನೆಯನ್ನು ನಿಯತಕಾಲಿಕವಾಗಿ ಆಡಳಿತ ವರ್ಗಕ್ಕೆ ವರದಿ ಮಾಡಲು ನೇಮಿಸಿದೆ. ಹಾಗೂ ಕಂಪನಿಯು ಕೆಲವೊಂದು ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಆಯ್ದ ಕೆಲವು ಕಾಮಗಾರಿಗಳನ್ನು ಪರಿಶೀಲಿಸಲು ಪ್ರಧಾನ ವ್ಯವಸ್ಥಾಪಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರುಗಳು ಪ್ರಯತ್ನಿಸಿರುತ್ತಾರೆ.

**ಮುಂದಿನ ದೃಷ್ಟಿಕೋನ :**

ನಿಮ್ಮ ನಿರ್ದೇಶಕರು ನಿಗಮಕ್ಕೆ ಮುಂಬರುವ ವರ್ಷಗಳಲ್ಲಿ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಗುರಿ ಧ್ಯೆರ್ಯಗಳನ್ನು ರೂಪಿಸಿ, ನಿಗಮದ ಒಟ್ಟಾರೆ ಅಭಿವೃದ್ಧಿ ಮತ್ತು ಲಾಭಾಂಶ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಂಡಿದ್ದಾರೆ. ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಒತ್ತು ನೀಡುತ್ತದೆ. ನಮ್ಮ ನಿಗಮವು ಈ ಕೆಲಸಗಳಲ್ಲಿ ಮುಂಚೂಣಿಯಲ್ಲಿರುವುದರಿಂದ ಪ್ರಮುಖ ಪಾತ್ರವಹಿಸಲು ಸನ್ನದ್ಧವಾಗಿದೆ. ಸರ್ಕಾರವು ನಮ್ಮ ನಿಗಮಕ್ಕೆ ಪಾರದರ್ಶಕ ಕಾಯ್ದೆ ಸೆಕ್ಷನ್ 4(ಜಿ) ಕೆಳಗೆ ರೂ.1.00 ಕೋಟಿಯೊಳಗಿನ ಕಾಮಗಾರಿಗಳಿಗೆ ವಿನಾಯಿತಿ ನೀಡಿದೆ. ಈ ವಿನಾಯಿತಿಯು ದಿನಾಂಕ 31.3.2011 ಕ್ಕೆ ಕೊನೆಗೊಳ್ಳುತ್ತದೆ. ಈ ರಿಯಾಯಿತಿಯನ್ನು ರೂ.2.00 ಕೋಟಿಗಳಿಗೆ ಏರಿಸಿ ಮುಂದಿನ ಮೂರು ವರ್ಷಕ್ಕೆ ವಿಸ್ತರಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು. ಸರ್ಕಾರವು ನಮ್ಮ ನಿಗಮಕ್ಕೆ 12403 ಆಸರೆ ಮನೆಗಳನ್ನು ಅಂದಾಜು ರೂ.125.00 ಕೋಟಿ ವೆಚ್ಚದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ನಿರ್ಮಿಸಲು ವಹಿಸಿದೆ. ಸರ್ಕಾರವು 454 ಹಳ್ಳಿಗಳಲ್ಲಿ ರೂ.45.00 ಕೋಟಿ ವೆಚ್ಚದಲ್ಲಿ ಸುವರ್ಣ ಗ್ರಾಮ ಯೋಜನೆಯ ಕೆಲಸಗಳನ್ನು ಮೂರನೇ ಹಂತದಲ್ಲಿ ವಹಿಸಿದೆ. ಅಲ್ಲದೆ ಸರ್ಕಾರವು 463 ಗ್ರಾಮ ಪಂಚಾಯಿತಿ ಕಟ್ಟಡಗಳ ನಿರ್ಮಾಣವನ್ನು I, II ಮತ್ತು III ನೇ ಹಂತದಲ್ಲಿ ರೂ.76.39 ಕೋಟಿಗಳಲ್ಲಿ ವಹಿಸಿದೆ. ಸಮಾಜ ಕಲ್ಯಾಣ ಇಲಾಖೆಯು 60 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಸತಿ ನಿಯಲಗಳ ನಿರ್ಮಾಣವನ್ನು ರೂ.51.02 ಕೋಟಿ ವೆಚ್ಚದಲ್ಲಿ ನಿರ್ಮಿಸಲು ವಹಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸುಮಾರು ರೂ.100.00 ಕೋಟಿ ವೆಚ್ಚದಲ್ಲಿ ರಸ್ತೆ ಅಗಲೀಕರಣ, ಡಾಂಬರು ಹಾಕುವುದು, ಸಮೂಹ ಮನೆಗಳ ನಿರ್ಮಾಣದ ಕಾಮಗಾರಿ ವಹಿಸಿದೆ. ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ನಿರ್ಮಿಸಲು ಹಾಗೂ ವಿನಿಯೋಗಿಸುವುದರಲ್ಲಿ ಮುಂಬರುವ ವರ್ಷದಲ್ಲಿ ನಿಗಮಕ್ಕೆ ಕಾಮಗಾರಿಯ ತೊಂದರೆ ಇರುವುರುದಿಲ್ಲ.

ಕಂಪನಿಯು ಆಗಸ್ಟ್ 2010ರಿಂದ ಮ್ಯೂಚ್ಯುಯಲ್ ಫಂಡ್ ಗಳಲ್ಲಿ ಚಾಲ್ತಿ ಖಾತೆಯಲ್ಲಿ ಉಳಿಯುವ ಹೆಚ್ಚಿನ ಹಣವನ್ನು ಹೂಡುವುದನ್ನು ಪ್ರಾರಂಭಿಸಿದೆ. ಈ ಹೂಡಿಕೆಯನ್ನು ಡೆಪ್ಟ್ ಆಧಾರದ ಮೇಲೆ ಮ್ಯೂಚ್ಯುಯಲ್ ಫಂಡ್ ಗಳಲ್ಲಿ ವಾರಂತ್ಯದ ರಜಾ ದಿನಗಳಲ್ಲಿ ಹೂಡಲಾಗುತ್ತದೆ. ಇದರಿಂದ ಕಂಪನಿಯು ತೆರಿಗೆ ರಹಿತ ಶೇಕಡ 4 ರಿಂದ 5 ರವರಗೆ ಡಿವಿಡೆಂಟ್ ಗಳಿಸುತ್ತದೆ. ಸದರಿ ವರ್ಷದಲ್ಲಿ ಕಂಪನಿಯು ಸುಮಾರು ರೂ.100.00 ಲಕ್ಷಗಳ ಆದಾಯ ಗಳಿಸಲಿದೆ.

**ಈ – ಆಡಳಿತ :**

ಸರ್ಕಾರದಿಂದ ಹೊರಡಿಸಿರುವ ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ ಮಾಹಿತಿ ಹಕ್ಕು ಕಾಯ್ದೆ 2000 ಅನ್ನು ಈ ಕಂಪನಿಯಲ್ಲಿ ಎಲ್ಲಾ ಹಂತದ ಚಟುವಟಿಕೆಗಳಲ್ಲಿ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯಲ್ಲಿ ಎಲ್ಲಾ ಉಪ ವಿಭಾಗ ಮಟ್ಟದಲ್ಲಿ ಗಣಕೀಕರಣಗೊಳಿಸಲಾಗಿದ್ದು, 2010–11ನೇ ಸಾಲಿನಿಂದ ಎಲ್ಲಾ ಲೆಕ್ಕಪತ್ರಗಳನ್ನು Tally Accounting System ನಲ್ಲಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕಂಪನಿಯ ಆಡಳಿತವನ್ನು ಬಲಪಡಿಸುವ ದೃಷಿಯಿಂದ ಹೆಚ್ಆರ್ಡಿ, ಇಆರ್‌ಪಿ ಸಲ್ಯೂಷನ್ ಮತ್ತು ಹೆಚ್ಆರ್ಎಂಎಸ್ ಸಾಫ್ಟವೇರ್ ವನ್ನು ಅಳವಡಿಸಲು ಕ್ರಮ ತೆಗೆದುಕೊಂಡಿದೆ.

**ನೌಕರರ ಶ್ರೇಯೋಭಿವೃದ್ಧಿ :**

ಕೆ.ಆರ್.ಐ.ಡಿ.ಎಲ್. ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಹೆಚ್ಚಿನ ಪರಿಜ್ಞಾನ ಹೊಂದಲು ಅನುಕೂಲವಾಗುವುದಕ್ಕೆ ಹಾಗೂ ಕಟ್ಟಡ ನಿರ್ಮಾಣ ತಂತ್ರಜ್ಞಾನದ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ, ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಸಂಸ್ಥೆಯಲ್ಲಿಯೇ ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ಇತರೆ ತರಬೇತಿ ಶಿಬಿರಗಳಿಗೆ ನಿಯೋಜಿಸಲಾಗಿರುತ್ತದೆ. **"ಪ್ರಾಡೆಕ್ಟಿವಿಟಿ ಥ್ರೂ ಪ್ರೋಸಸ್ ಅಂಡ್ ಪೀಪಲ್"** ವಿಷಯದ ಬಗ್ಗೆ ಅಂತರ್ ರಾಜ್ಯದಲ್ಲಿ ತರಬೇತಿಯನ್ನು ಪಡೆಯಲು ಕಂಪನಿಯು 3 ಜನ ಪ್ರಧಾನ ವ್ಯವಸ್ಥಾಪಕರುಗಳನ್ನು ಅಂಡಮಾನ್ ಮತ್ತು ನಿಕೋಬಾರ್ (ಪೋರ್ಟ್ ಬ್ಲೇರ್) ದ್ವೀಪಕ್ಕೆ 5 ದಿನಗಳ ತರಬೇತಿ ಕಾರ್ಯಕ್ರಮಕ್ಕೆ ನಿಯೋಜಿಸಲಾಗಿರುತದೆ. ಕಂಪನಿಯು ಮುಂದಿನ ವರ್ಷಗಳಲ್ಲಿ ಉತ್ಸಾಹಿ ನೌಕರರನ್ನು ನೀಡುವ ದೃಷ್ಟಿಯಿಂದ ಅಕ್ಟೋಬರ್–2010 ರಂದು 10 ಜನ ಇಂಜಿನಿಯರ್‌ಗಳನ್ನು ನೇಮಿಸಿಕೊಂಡು ಮತ್ತು ಹಂತ ಹಂತವಾಗಿ ಹೆಚ್ಚಿನ ಇಂಜಿನಿಯರ್‌ಗಳನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದೆ.

**ಇಂಧನ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ :**

ಕಂಪನಿಯು ಮುಖ್ಯವಾಗಿ ನಿರ್ಮಾಣ ವ್ಯವಹಾರದಲ್ಲಿ ತೊಡಗಿರುವುದರಿಂದ ಕಂಪನಿಗಳ (ನಿರ್ದೇಶಕರ ಮಂಡಲಿಯ ವರದಿಯಲ್ಲಿ ವಿವರಗಳ ಪ್ರಕಟಪಡಿಸುವಿಕೆ) ನಿಯಮಗಳು, 1988 ರನ್ವಯ ಇಂಧನ ಸಂರಕ್ಷಣೆಯ ವಿವರಗಳು ಕಂಪನಿಗೆ ಅನ್ವಯಿಸುವುದಿಲ್ಲ.

**ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ :**

ವರದಿಯ ವರ್ಷದಲ್ಲಿ ವಿದೇಶಿ ವಿನಿಮಯದಿಂದ ಯಾವುದೇ ಗಳಿಕೆ ಮತ್ತು ವೆಚ್ಚವಿರುವುದಿಲ್ಲ.

**ನೌಕರರ ವಿವರಗಳು :**

ಕಂಪನಿಗಳ ಕಾಯ್ದೆ 1956ರ ಅಧಿನಿಯಮ 217 (2ಎ) ಅಡಿಯಲ್ಲಿ ವಿವರಗಳನ್ನು ಸಲ್ಲಿಸಬೇಕಾಗಿರುವ ನೌಕರರು ಯಾರೂ ಇಲ್ಲ.

**ಲೆಕ್ಕ ಪರಿಶೋಧಕರು :**

ಮೆ॥ ಜ್ಞಾನೋಭ ಅಂಡ್ ಭಟ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2009-10ನೇ ಹಣಕಾಸಿನ ವರ್ಷಕ್ಕೆ ಶಾಸನ ಬದ್ದ ಲೆಕ್ಕ ಪರಿಶೋಧಕರೆಂದು ನಿಯಂತ್ರಕರು ಮತ್ತು ಭಾರತದ ಆಡಿಟರ್ ಜನರಲ್‌ರವರು ನೇಮಕ ಮಾಡಿರುತ್ತಾರೆ ಹಾಗೂ 2010-11ನೇ ಸಾಲಿಗೂ ಸಹ ಮೆ॥ ಜ್ಞಾನೋಭ ಅಂಡ್ ಭಟ್, ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ರವರನ್ನು ಶಾಸನ ಬದ್ಧ ಲೆಕ್ಕ ಪರಿಶೋಧಕರೆಂದು ನೇಮಕ ಮಾಡಿರುತ್ತಾರೆ.

**ಶಾಸನ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ಉತ್ತರ :**

ಶಾಸನ ಬದ್ಧ ಲೆಕ್ಕಪರಿಶೋಧಕರ ಆಕ್ಷೇಪಣೆಗಳಿಗೆ ನೀಡಿರುವ ಉತ್ತರಗಳನ್ನೊಳಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ತಾರೀಖು 15/11/2010 ಅನ್ನು ಈ ವರದಿಗೆ ಲಗತ್ತಿಸಲಾಗಿದೆ.

**ಭಾರತದ ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರಿಂದ ಲೆಕ್ಕಪತ್ರಗಳ ಪುನರ್ ಪರಿಶೀಲನೆ :**

ನಿಯಂತ್ರಕರು ಮತ್ತು ಆಡಿಟರ್ ಜನರಲ್‌ರವರು ನೀಡಿರುವ ನಿರಾಕ್ಷೇಪಣೆಗಳ ಪ್ರಮಾಣ ಪತ್ರವನ್ನು ಈ ವರದಿಯಲ್ಲಿ ಮುದ್ರಿಸಲಾಗಿದೆ.

**ನೌಕರರು :**

ನೌಕರರೊಂದಿಗೆ ಉತ್ತಮ ಸಂಬಂಧ ಹೊಂದಿದ್ದು ಕಂಪನಿಯ ನೌಕರರ ನಿಸ್ಪೃಹತೆ, ಕಠಿಣ ಶ್ರಮ ಮತ್ತು ಸಹಕಾರವನ್ನು ನಿರ್ದೇಶಕರು ಶ್ಲಾಘಿಸಿದ್ದಾರೆ.

**ಶಾಸನಗಳ ಪರಿಪಾಲನೆ :**

ಕಂಪನಿಯು, ಕಂಪನಿ ಕಾಯ್ದೆ, 1956, ಕಾರ್ಮಿಕ ಕಾನೂನುಗಳು ಮತ್ತು ಇತರ ಕಾರ್ಪೋರೇಟ್ ಕಾನೂನುಗಳ ಅಡಿಯಲ್ಲಿ ನಿಗದಿಪಡಿಸಿರುವ ವಿವಿಧ ಶಾಸನಗಳ ಅಗತ್ಯತೆಗಳನ್ನು ಪಾಲಿಸಿದೆ.

**ನಿರ್ದೇಶನಾಲಯ:**

ಸರ್ಕಾರವು ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ನಿರ್ದೇಶಕರುಗಳನ್ನು ನೇಮಿಸಿರುತ್ತದೆ.

ಅ) ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಶ್ರೀ ಎನ್. ಗೋಕುಲ್‌ರಾಮ್, ಭಾಆಸೇ., ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇವರನ್ನು ಕಂಪನಿಯ ಅಧ್ಯಕ್ಷರಾಗಿ ಶ್ರೀ ಪಿ.ರವಿಕುಮಾರ್, ಭಾಆಸೇ.,ಅವರ ಬದಲಾಗಿ ದಿನಾಂಕ:21/04/2010 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಆ) ಶ್ರೀ. ಪ್ರಭಾಕರ್ ಹೆಚ್. ಚಿನಿ, ಮುಖ್ಯ ಅಭಿಯಂತರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಆರ್.ಪಿ. ಕುಲಕರ್ಣಿ ಅವರ ಬದಲಾಗಿ ದಿನಾಂಕ:28/06/2010 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿದೆ.

ಇ) ಶ್ರೀ. ಪಿ.ಎನ್ ಶ್ರೀನಿವಾಸಚಾರಿ, ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ನೀರಾವರಿ ಇಲಾಖೆ ಇವರನ್ನು ಕಂಪನಿಯ ನಿರ್ದೇಶಕರಾಗಿ ಶ್ರೀ. ಎಂ.ಆರ್. ಕಾಂಬ್ಳೆ, ಭಾಆಸೇ., ಅವರ ಬದಲಾಗಿ ದಿನಾಂಕ:28/06/2010 ರಿಂದ ಜಾರಿಗೆ ಬರುವಂತೆ ನೇಮಿಸಲಾಗಿತ್ತು.

ದಿನಾಂಕ 01.11.2010ರಂದು ಕಂಪನಿಯ ಅಧ್ಯಕ್ಷರಾದ ಶ್ರೀ ಎನ್. ಗೋಕುಲ ರಾಂ, ಭಾಆಸೇ., ಇವರು ನಿಧನರಾದ ಪ್ರಯುಕ್ತ, ಆಡಳಿತ ಮಂಡಳಿಯು ತೀವ್ರ ಸಂತಾಪವನ್ನು ವ್ಯಕ್ತಪಡಿಸಿ, ಇವರ ಸೇವೆಯ ಬಗ್ಗೆ ಶ್ಲಾಘಿಸಿದರು. ಶ್ರೀ ಎಂ.ಆರ್. ಕಾಂಬ್ಳೆ, ಭಾಆಸೇ., ಡಾ॥ ಬಾಬೂರಾವ್ ಮುಡಬಿ, ಭಾಆಸೇ., ಮತ್ತು ಶ್ರೀ ಆರ್.ಪಿ ಕುಲಕರ್ಣಿ, ಕೆ.ಇ.ಎಸ್ ರವರುಗಳು ನಿರ್ದೇಶಕರಾಗಿ ಪ್ರಸಕ್ತ ವರ್ಷದಲ್ಲಿ ಸೇವೆ ಸಲ್ಲಿಸಿರುವುದನ್ನು ಶ್ಲಾಘಿಸಲಾಗಿದೆ.

**ನಿರ್ದೇಶಕರ ಹೊಣೆಗಾರಿಕೆ**

1956ರ ಕಂಪನಿಗಳ ಅಧಿನಿಯಮದ 217 (2ಎಎ)ನೇ ಅಧಿನಿಯಮದ ಅಡಿಯಲ್ಲಿನ ಉಪಬಂಧಗಳಿಗೆ ಅನುಗುಣವಾಗಿ ನಿರ್ದೇಶಕರು ಈ ಮುಂದಿನ ಅಂಶಗಳನ್ನು ತಿಳಿಸಿದ್ದಾರೆ:

ಎ) ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವಾಗ ಅನ್ವಯವಾಗುವ ಲೆಕ್ಕಪತ್ರದ ಗುಣಮಟ್ಟಗಳನ್ನು ಅನುಸರಿಸಲಾಗಿದೆ ಹಾಗೂ ಪಾಲಿಸುತ್ತಿದ್ದ ನಿಯಮದಲ್ಲಿ ಬದಲಾವಣೆಗಳಾಗಿದ್ದಲ್ಲಿ ಅಗತ್ಯವಾದ ವಿವರಣೆ ಕೊಡಲಾಗಿದೆ.

ಬಿ) ವಾರ್ಷಿಕ ವರ್ಷದ ಕೊನೆಯಲ್ಲಿ ಕಂಪನಿಯ ಸ್ಥಿತಿಗತಿಗಳು ಮತ್ತು ಆ ಅವಧಿಯ ಕಂಪನಿಯ ನಷ್ಟಗಳ ವಾಸ್ತವ ಚಿತ್ರಣವನ್ನು ನೀಡುವ ಸಲುವಾಗಿ ನಿರ್ದೇಶಕರು ಸಮಂಜಸವಾದ ಮತ್ತು ವಿವೇಚನಾಯುಕ್ತವಾದ ಲೆಕ್ಕಪತ್ರ ಕಾರ್ಯನೀತಿಗಳನ್ನು ಆಯ್ದುಕೊಂಡು ಅವುಗಳನ್ನು ನಿರಂತರವಾಗಿ ಅನ್ವಯಿಸಿ ನಿರ್ಣಯಗಳನ್ನು ಮತ್ತು ಅಂದಾಜುಗಳನ್ನು ಕೈಗೊಂಡಿದ್ದಾರೆ.

ಸಿ) ಕಂಪನಿಯ ಆಸ್ತಿಗಳನ್ನು ರಕ್ಷಿಸುವ ಮತ್ತು ಮೋಸ ಮತ್ತು ಇತರ ಅಕ್ರಮಗಳನ್ನು ನಿವಾರಿಸುವ ಮತ್ತು ಪತ್ತೆಹಚ್ಚುವ ಸಲುವಾಗಿ 1956ರ ಕಂಪನಿಗಳ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಲೆಕ್ಕಪತ್ರಗಳ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ಮತ್ತು ಸಾಕಷ್ಟು ಜಾಗರೂಕತೆಯನ್ನು ವಹಿಸಲಾಗಿದೆ.

ಡಿ) ಚಾಲ್ತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ.

**ಕೃತಜ್ಞತೆಗಳು :**

ನಿರ್ದೇಶಕರುಗಳು ಭಾರತ ಸರ್ಕಾರಕ್ಕೆ, ಕರ್ನಾಟಕ ಸರ್ಕಾರಕ್ಕೆ, ಸರ್ಕಾರದ ಇಲಾಖೆಗಳಿಗೆ, ಮಾನ್ಯ ಶಾಸಕರುಗಳಿಗೆ, ಶಾಸಕಾಂಗ ಸಮಿತಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಹಣಕಾಸು ಇಲಾಖೆಗೆ, ಜಿಲ್ಲಾ ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಾವು ನೀಡಿದ ಸಹಕಾರ, ಮಾರ್ಗದರ್ಶನ ಮತ್ತು ಬೆಂಬಲಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ರೀತಿಯ ಸಹಕಾರ ಮತ್ತು ಬೆಂಬಲ ಇಲ್ಲದಿದ್ದಲ್ಲಿ ಪ್ರಸಕ್ತ ವರ್ಷದಲ್ಲಿನ ಪ್ರಗತಿ ಮಾಡಲಾಗುತ್ತಿರಲಿಲ್ಲವೆಂದು ತಿಳಿಸಿದ್ದಾರೆ. ಪ್ರಸಕ್ತ ವರ್ಷದಲ್ಲಿ ಗ್ರಾಹಕರು, ಬ್ಯಾಂಕಿನವರು, ಸಲಹೆಗಾರರು, ಶಾಸನಬದ್ಧ ಲೆಕ್ಕ ಪರಿಶೋಧಕರು, ಆಂತರಿಕ ಲೆಕ್ಕ ಪರಿಶೋಧಕರು ಮತ್ತು ಅಕೌಂಟೆಂಟ್ ಜೆನರಲ್ ಲೆಕ್ಕ ಪರಿಶೋಧಕರು ಮತ್ತು ನೌಕರರು ನಿಗಮಕ್ಕೆ ನೀಡಿದ ಸಹಕಾರವನ್ನೂ ಮಂಡಳಿ ಅಭಿನಂದಿಸುತ್ತದೆ ಹಾಗೂ ಇನ್ನು ಮುಂದೆ ಸಹ ಇದೇ ತರಹ ಸಹಕಾರವನ್ನು ಬಯಸುತ್ತದೆ.

ಮಂಡಲಿಯ ಪರವಾಗಿ,

ಸಹಿ/– ಸಹಿ/–

ಸ್ಥಳ: ಬೆಂಗಳೂರು
ದಿನಾಂಕ: 15-11-2010

(ಪ್ರಭಾಕರ್ ಹೆಚ್.ಚಿನಿ)
ನಿರ್ದೇಶಕರು

(ಶ್ರೀ ಅಶೋಕ್ ಕುಮಾರ್‌ಸಿಂಗ್)
ವ್ಯವಸ್ಥಾಪಕ ನಿರ್ದೇಶಕರು

**ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 31ನೇ ಮಾರ್ಚ್ 2010ಕ್ಕೆ ಮುಕ್ತಾಯಗೊಂಡ ವರ್ಷದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ, 1956 619(4)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಮಾಡಿರುವ ಟೀಕೆ ಟಿಪ್ಪಣಿಗಳು.**

ಕಂಪನಿಗಳ ಅಧಿನಿಯಮ, 1956ರ ಮೇರೆಗೆ ನಿಯಮಿಸಿರುವ ಹಣಕಾಸು ವರದಿಯ ಚೌಕಟ್ಟಿಗೆ ಅನುಗುಣವಾಗಿ 2010ರ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ವಿವರಪಟ್ಟಿಗಳನ್ನು ಸಿದ್ಧಪಡಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಂಪನಿಗಳ ಅಧಿನಿಯಮ, 1956ರ 619 (2)ನೇ ಪ್ರಕರಣದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರು, ಅವರ ವೃತ್ತಿಸಂಸ್ಥೆಯಾದ ಭಾರತದ ಚಾರ್ಟರ್ಡ್ ಅಕೌಂಟೆಂಟರು ಗೊತ್ತುಪಡಿಸಿರುವ ಲೆಕ್ಕಪರಿಶೋಧನೆ ಮತ್ತು ಖಾತ್ರಿ ಮಾನಕಗಳಿಗೆ ಅನುಸಾರವಾಗಿ ಸ್ವತಂತ್ರ ಲೆಕ್ಕಪರಿಶೋಧನೆಯನ್ನು ಆಧರಿಸಿ ಕಂಪನಗಳ ಅಧಿನಿಯಮ, 1956ರ 227ನೇ ಪ್ರಕರಣದ ಮೇರೆಗೆ ಈ ಹಣಕಾಸಿನ ವಿವರಪಟ್ಟಿಗಳನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸಲು ಜವಾಬ್ದಾರರಾಗಿದ್ದಾರೆ. ಇದನ್ನು ಅವರು ನಿರ್ವಹಿಸಿದ್ದಾರೆಂದು ತಿಳಿಸಲಾಗಿದೆ. ಅವರ ಲೆಕ್ಕಪರಿಶೋಧನಾ ವರದಿ ದಿನಾಂಕ: 15ನೇ ನವೆಂಬರ್ 2010ನ್ನು ನೋಡಿ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರ ಪರವಾಗಿ, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲೆಪ್‌ಮೆಂಟ್ ಲಿಮಿಟೆಡ್, ಬೆಂಗಳೂರು ಇದರ 2010ರ ಮಾರ್ಚ್ 31ರಂದು ಕೊನೆಗೊಳ್ಳುವ ವರ್ಷದ ಹಣಕಾಸು ವಿವರಪಟ್ಟಿಗಳ ಪೂರಕ ಲೆಕ್ಕಪರಿಶೋಧನೆಯನ್ನು ಕಂಪನಿಗಳ ಅಧಿನಿಯಮ, 1956ರ 619 (3) (ಬಿ) ಪ್ರಕರಣದ ಮೇರೆಗೆ ನಡೆಸಲಾಗಿದೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಕಾರಿ ಕಾಗದಪತ್ರಗಳನ್ನು ನೋಡದೆ ಸ್ವತಂತ್ರವಾಗಿ ನಿರ್ವಹಿಸಲಾಗಿದೆ ಮತ್ತು ಅದು ಮೂಲತಃ ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನ ಸಿಬ್ಬಂದಿಯ ವಿಚಾರಣೆಗಳನ್ನು ಮತ್ತು ಕೆಲವು ಲೆಕ್ಕಪತ್ರ ದಾಖಲೆಗಳ ಆಯ್ಕೆ ಪರೀಕ್ಷೆ ಮಾಡುವುದಕ್ಕೆ ಸೀಮಿತವಾಗಿದೆ. ನಾನು ಲೆಕ್ಕಪರಿಶೋಧನೆ ಮಾಡಿರುವ ಪ್ರಕಾರ ಕಂಪನಿಗಳ ಅದಿನಿಯಮ, 1956ರ 619 (4) ನೇ ಪ್ರಕರಣದ ಮೇರೆಗೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯ ಬಗ್ಗೆ ಅಥವಾ ಪೂರಕವಾಗಿ ಯಾವುದೇ ಟೀಕೆ ಟಿಪ್ಪಣಿಗೆ ಅವಕಾಶವಾಗುವಂಥ ಯಾವುದೇ ಗಮನಾರ್ಹ ಸಂಗತಿಯು ಗಮನಕ್ಕೆ ಬಂದಿಲ್ಲ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರವಾಗಿ
ಸಹಿ
(ಡಿ.ಜೆ. ಭದ್ರ)
ಪ್ರಧಾನ ಮಹಾಲೇಖಪಾಲರು,
(ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು.

ಸ್ಥಳ : ಬೆಂಗಳೂರು
**ದಿನಾಂಕ: 16ನೇ ಡಿಸೆಂಬರ್ 2010**

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲೆಪ್‌ಮೆಂಟ್ ಲಿಮಿಟೆಡ್
## ಚಿನ್ನಸ್ವಾಮಿ ಕ್ರೀಡಾಂಗಣ, ರಾಜಭವನ ರಸ್ತೆ, ಬೆಂಗಳೂರು– 560 001
## 31.3.2010ಕ್ಕೆ ಕೊನೆಯಾಗುವ ವರ್ಷದ ಕೆಆರ್‌ಐಡಿಎಲ್ ಸಂಸ್ಥೆಯ ಲೆಕ್ಕಪತ್ರಗಳ ಬಗ್ಗೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ

| ಕ್ರ.ಸಂ. | ಆಕ್ಷೇಪಣೆಗಳು | ಆಡಳಿತ ಮಂಡಲಿಯ ಉತ್ತರಗಳು |
|---|---|---|
| 1. | **ಆದಾಯ ಗುರುತಿಸುವುದು:**<br>**ಆದಾಯ ಗುರುತಿಸುವುದು:**<br>ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದ ಆದಾಯವನ್ನು AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ದರ ಪಟ್ಟಿಯ ದರದಂತೆ ನಿರ್ವಹಿಸಿದ ಮೌಲ್ಯದ ಕಾಮಗಾರಿಗಳನ್ನು ಹೊರತುಪಡಿಸಿ, ಕಂಪನಿಯು ಸೇವಾ ಶುಲ್ಕವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಪ್ರಸಕ್ತ ವರ್ಷದ ಆದಾಯವನ್ನು ಗುರಿತಿಸುವಲ್ಲಿ ವ್ಯತ್ಯಾಸವಿರುವುದರಿಂದ ಅದನ್ನು ನಿರ್ಧರಿಸಲಾಗುವುದಿಲ್ಲ. | ವಹಿಸಿದ ಕಾಮಗಾರಿಗಳು ಶೇಕಡವಾರು ಪೂರ್ಣಗೊಂಡಂತೆ ನಿಗಮದಲ್ಲಿ ಅಪೂರ್ಣಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಆದಾಯವನ್ನು ಗುರುತಿಸುವ ಸಲುವಾಗಿ AS–7 ವಿಧಾನದ ಆಧಾರದ ಮೇರೆಗೆ ಗುರುತಿಸಲಾಗುವುದು. ವಾಸ್ತವಿಕ ವೆಚ್ಚ ಹಾಗೂ ಟೆಂಡರ್ ಮೊತ್ತದ ನಡುವಿನ ವ್ಯತ್ಯಾಸವನ್ನು ಸಮರ್ಥಿಸಿಕೊಳ್ಳಲಾಗದ ಕಾರಣ ನಿಗಮವು ಹೆಚ್ಚಿಗೆಯಾದ ಆದಾಯವನ್ನು ಗುರುತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |
| 2. | ಹಾನಿಗೊಂಡ ಆಸ್ತಿಗಳ ಬಗ್ಗೆ ಅವಲೋಕನವನ್ನು ಮಾಡಿದಾಗ ಇದರ ಬಗ್ಗೆ ಕಂಪನಿಯು ಯಾವುದೇ ಕಾರ್ಯನೀತಿಯನ್ನು ರಚಿಸಿರುವುದಿಲ್ಲ. ತತ್ಪರಿಣಾಮವಾದ ಹಾನಿಯಿಂದ ಲೆಕ್ಕ ಪತ್ರದಲ್ಲಿ ನಷ್ಟ ಉಂಟಾಗುತ್ತದೆ. ಆದ್ದರಿಂದ, ಸ್ಥಿರಾಸ್ತಿಗಳನ್ನು ಅಧಿಕವಾಗಿ ತೋರಿಸಲಾಗಿದೆ. | ಕಂಪನಿಯು ಕಾರ್ಯನೀತಿಯನ್ನು ರಚಿಸಿದ್ದು ಇದರಲ್ಲಿ ವಾರ್ಷಿಕ ದಾಸ್ತಾನುಗಳ ಜೊತೆಗೆ ಸ್ಥಿರಾಸ್ತಿಗಳನ್ನು ಸೇರಿರುತ್ತದೆ. ನಿರುಪಯುಕ್ತ ಮತ್ತು ಸಂಪೂರ್ಣ ಶಿಥಿಲಗೊಂಡ/ ಸ್ಥಿರಾಸ್ತಿಗಳನ್ನು ಗುರುತಿಸಿ, ಇವುಗಳನ್ನು ಲೆಕ್ಕದಿಂದ ತೆಗೆದು ಹಾಕಲಾಗಿದೆ. ಪ್ರಸಕ್ತ ಸಾಲಿನಲ್ಲಿ ಕಂಪನಿಯ ಗುರುತಿಸಲಾದ ಆಸ್ತಿಗಳನ್ನು ಲೆಕ್ಕ ಪತ್ರದಿಂದ ತೆಗೆದು ಹಾಕಿರುವುದಿಲ್ಲ. |
| 3. | 2003–04 ರಿಂದ 2008–09ರ ವರೆಗಿನ ಚಿಲ್ಲರೆ ಸಾಲಗಾರರ ಅಡಿಯಲ್ಲಿ ತೋರಿಸಲಾದ ಬಾಕಿಯನ್ನು ಪಕ್ಷಕಾರರು ಸ್ಥಿರೀಕರಿಸಿಲ್ಲ. ಅಲ್ಲದೆ, 2003–04 ರಿಂದ 2005–06ರ ಲೆಕ್ಕ ವರ್ಷಗಳಿಗೆ ಸಂಬಂಧಪಟ್ಟಂತೆ ಒಟ್ಟಾರೆ 2172.50 ಲಕ್ಷ ರೂ.ಗಳಷ್ಟು ಮೊತ್ತಕ್ಕೆ ಸಂಬಂಧಿಸಿದ ಚಿಲ್ಲರೆ ಸಾಲಗಾರರನ್ನು ಕಾಲಪರಿಮಿತಿಯಿಂದ ಪ್ರತಿಷೇಧಿಸಲಾಗಿದೆ ಹಾಗೂ ಕಂಪನಿಯು ಸಂದೇಹಾಸ್ಪದ ಸಾಲಗಳು ಯಾವುದಾದರೂ ಇದ್ದರೆ, ಅವುಗಳಿಗೆ ಯಾವುದೇ ಉಪಬಂಧ ಕಲ್ಪಿಸಿಲ್ಲ. ಆದ್ದರಿಂದ ಪ್ರಸಕ ವರ್ಷದ ಲಾಭವನ್ನು ಹೆಚ್ಚುವರಿಯಾಗಿ ಪರಿಗಣಿಸಲಾಗಿದೆ. | ಕಂಪನಿಯು 2003–04ನೇ ಸಾಲಿನಲ್ಲಿ ಗುರುತಿಸಿದ ಏಜೆನ್ಸಿಗಳಿಂದ ಬರಬೇಕಾದ ರೂ.1676.05 ಲಕ್ಷಗಳಲ್ಲಿ ರೂ.817.84 ಲಕ್ಷಗಳನ್ನು ಬಾರದೇ ಇರುವ ಹಣ ಎಂದು ತೆಗೆದು ಹಾಕಲಾಗಿದೆ. 2005ರಿಂದ ಮೆ॥ ರಾಜೀವ್‌ಗಾಂಧಿ ರೂರಲ್ ಹೌಸಿಂಗ್ ಕಾರ್ಪೊರೇಷನ್‌ನಲ್ಲಿ ರೂ.100 ಲಕ್ಷಗಳು ಕಂಪನಿಗೆ ಬಾಕಿ ಉಳಿದಿರುತ್ತದೆ ಮತ್ತು ಬಾರದೇ ಇರುವ ಸಾಲವೆಂದು ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ಬಾರದೇ ಇರುವ ಸಾಲವನ್ನು ವಸೂಲು ಮಾಡಲು ಕಂಪನಿಯು ಆದ್ಯತೆ ಮೇರೆಗೆ ಮುಂದುವರೆಯುವುದು. ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ಪ್ರಕರಣಗಳ ಆದ್ಯತೆ ಮೇರೆಗೆ 5 ವರ್ಷಗಳಿಗಿಂತ ಹೆಚ್ಚಿನ ಬಾಕಿಗಳನ್ನು ಲೆಕ್ಕದಿಂದ ತೆಗೆಯ ಹಾಕಲಾಗುವುದು. ಸರ್ಕಾರಿ ಇಲಾಕೆಗಳಿಂದ ಬರಬೇಕಾದ ಬೇಬಾಕಿ ಮೊತ್ತಗಳನ್ನು ಒಂದೇ ವರ್ಷದಲ್ಲಿ ಸರಿಯಾದ ಕ್ರಮಗಳಲ್ಲಿ ಈ ಮೊತ್ತವನ್ನು (ಏರ್ಪಾಡು) ಮಾಡಲಾಗುವುದಿಲ್ಲ. |

| | | |
|---|---|---|
| 4. | ಸರ್ಕಾರ ಮತ್ತು ಸರ್ಕಾರೀ ಸಂಸ್ಥೆಗಳಲ್ಲಿರುವ ಠೇವಣಿಗಳು ಸೇರಿದಂತೆ ಸಾಲಗಳು ಮತ್ತು ಮುಂಗಡಗಳನ್ನು ಸ್ಥಿರೀಕರಿಸಿ ಸಮರ್ಥಿಸಿಕೊಂಡಿಲ್ಲ. ಇತರರಿಗೆ (ಪ್ರಸಕ್ತ ಆಸ್ತಿ) ನೀಡಿರುವ ರೂ.1765.89 ಲಕ್ಷ ರೂಪಾಯಿಗೆ ಸಮನಾದ ಸಾಲಗಳ ಮತ್ತು ಮುಂಗಡಗಳ ಸಂಬಂಧದಲ್ಲಿ ತಹಲ್‌ವರೆಗೆ ಮರುಹೊಂದಾಣಿಕೆ ಮಾಡಿಲ್ಲ ಮತ್ತು ಅನುಸೂಚಿಗಳನ್ನು ಇಟ್ಟಿಲ್ಲ. ಇದರಲ್ಲಿ ಅನೇಕ ಹಳೆ ಬಾಕಿಗಳು ಸೇರಿವೆ. ಈ ಬಗ್ಗೆ ಪುನರ್ ಪರಿಶೀಲಿಸಿ ಅನುಸರಣಾ ಕ್ರಮ ಕೈಗೊಳ್ಳುವ ಅಗತ್ಯವಿದೆ. ವಸೂಲಿ ಮಾಡಬೇಕಾದ ಸಾಲಗಳು ಮತ್ತು ಅದರ ಮುಂಗಡಗಳನ್ನು ಖಚಿತವಾಗಿ ತಿಳಿಸದಿರುವುದರಿಂದ, ಕಂಪನಿಯ ಲಾಭ/ ನಷ್ಟದ ಮೇಲೆ ಆಗುವ ಅದರ ಸಾಕ್ಷೇಪ ಪರಿಣಾಮವನ್ನು ಖಚಿತವಾಗಿ ಹೇಳಲಾಗುವುದಿಲ್ಲ. | ಆಯಾ ವಿಭಾಗಗಳ ಉಪ ನಿರ್ದೇಶಕರ ನೇತೃತ್ವದಲ್ಲಿ ಪ್ರತ್ಯೇಕ ಅನುಸೂಚಿಗಳನ್ನು ಸಿದ್ಧಪಡಿಸಲು ಪ್ರತ್ಯೇಕ ತಂಡವೊಂದನ್ನು ರಚಿಸಲು ಪ್ರಯತ್ನಗಳನ್ನು ಮಾಡಲಾಗಿದೆ. ಅದನ್ನು ಪೂರೈಸಿದ ಮೇಲೆ, ವ್ಯತ್ಯಾಸಗಳೇನಾದರೂ ಇದ್ದಲ್ಲಿ, ಅದನ್ನು ತದನುಸಾರವಾಗಿ ಲೆಕ್ಕಹಾಕಲಾಗುವುದು |
| 5. | 698.05 ಲಕ್ಷ ರೂಪಾಯಿಗೆ ಸಮನಾದ ಸಣ್ಣಪುಟ್ಟ ಸಾಲಗಾರರಿಂದ ಸಂಗ್ರಹಿಸಿದ ಮೊತ್ತ ಮತ್ತು ಇತರ ಗ್ರಾಹಕರಿಂದ ಸಂಗ್ರಹಿಸಿದ ಮುಂಗಡ ಹಣ ಠೇವಣಿಯು ಸ್ಥಿರೀಕರಣಕ್ಕೆ ಮತ್ತು ಮರುಹೊಂದಾಣಿಕೆಗೆ ಒಳಪಟ್ಟಿದೆ. ಮೇಲೆ ಹೇಳಿರುವುದಕ್ಕೆ ಸಂಬಂಧಿಸಿದಂತೆ ಅನುಸೂಚಿಗಳನ್ನು ತಹಲ್‌ವರೆಗೆ ಇಟ್ಟಿಲ್ಲ. | ಸಣ್ಣಪುಟ್ಟ ಸಾಲಗಾರರ ಮೊತ್ತ, ಎಸ್.ಡಿ ಫರ್ಮ್‌ಗಳು, ಮುಂಗಡ ಹಣ ಠೇವಣಿ ಮುಂತಾದವುಗಳನ್ನು ಮರುಹೊಂದಾಣಿಕೆ ಮಾಡಲು ಎಲ್ಲಾ ಪ್ರಯತ್ನಗಳನ್ನು ಆಡಳಿತವರ್ಗವು ಮಾಡುತ್ತಿದೆ ಮತ್ತು ಮರುಹೊಂದಾಣಿಕೆಯ ಕಾರ್ಯವನ್ನು ಪೂರೈಸಿದ ತರುವಾಯ ಸರಿಯಾದ ಬಾಕಿ ಮೊತ್ತಗಳನ್ನು ಲೆಕ್ಕಪುಸ್ತಕಗಳಲ್ಲಿ ತೋರಿಸಲಾಗುವುದು. |
| 6. | ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು, ಮುಂ.ಹ.ಠೇ, ಮುಂಗಡಗಳ ಸಂಬಂಧದಲ್ಲಿ, ನಗದುರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ವಸೂಲಿಯಾಗಬೇಕಾದ ಗ್ರಾಹಕವಾರು ಬಾಕಿ ಮೊತ್ತ ಮತ್ತು ಠೇವಣಿಗಳು ಲಭ್ಯವಿರುವುದಿಲ್ಲ. ಈ ಲೆಕ್ಕಗಳಲ್ಲಿ ಅನೇಕ ಬಾಬ್ತುಗಳಲ್ಲಿ ದೀರ್ಘಾವಧಿಯಿಂದ ಬರಬೇಕಾದ ಬಾಕಿ ಮೊತ್ತಗಳು ಸೇರಿವೆ. ಅದನ್ನು ಗ್ರಾಹಕವಾರು ವಿವರಗಳು / ವಿಂಗಡಣೆಗಳೊಂದಿಗೆ ಪುನರ್ ಪರಿಶೀಲಿಸುವವರೆಗೆ ಏರ್ಪಾಡುಗಳನ್ನು, ಅಗತ್ಯವಿರುವ ಹೊಂದಾಣಿಕೆಗಳು ಯಾವುದಾದರೂ ಇದ್ದರೆ ಅವುಗಳನ್ನು ಮಾಡಿಲ್ಲ. ಅಲ್ಲದೆ ಶೀರ್ಷಿಕೆಗಳ ಅಡಿಯಲ್ಲಿನ ಬಾಕಿಗಳು, ಕೆಲವು ಗ್ರಾಹಕರ ಖರ್ಚುಶಿಲ್ಕುಗಳನ್ನು ಇತರ ಗ್ರಾಹಕರ ಜಮಾ ಶಿಲ್ಕುಗಳಲ್ಲಿ, ಹಾಗೆಯೇ ಕೆಲವು ಗ್ರಾಹಕರ ಜಮಾ ಶಿಲ್ಕುಗಳಲ್ಲಿ ಇತರ ಗ್ರಾಹಕರ ಖರ್ಚು ಶಿಲ್ಕುಗಳನ್ನು ತೋರಿಸಿರುವುದರಿಂದ, ಮತ್ತು ಜಮಾ ಖರ್ಚು ಪಟ್ಟಿಯಲ್ಲಿ, ಸಂದಾಯವಾಗಬೇಕಾದ / | ಮರುಹೊಂದಾಣಿಕೆಗೆ ಒಳಪಟ್ಟು, ಸಣ್ಣಪುಟ್ಟ ಸಾಲಗಾರರು, ಇತರ ಹೊಣೆಗಾರಿಕೆಗಳು ಮುಂ.ಹ.ಠೇ., ಮುಂಗಡಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಅನುಸೂಚಿಗಳು ಲಭ್ಯವಿದೆ. ಮೇಲಿನ ಲೆಕ್ಕ ಶೀರ್ಷಿಕೆಯನ್ನು ಹೊಂದಾಣಿಕೆ ಮಾಡಲು ಮಂಡಳಿಯು ಪ್ರಯತ್ನಿಸುತ್ತಿದೆ. |

| | |
|---|---|
| ವಸೂಲಿಯಾಗಬೇಕಾದ ಪ್ರಕಟಿಸುವ ಬಾಕಿಗಳಿಗೆ ಬದಲಾಗಿ ನಿವ್ವಳ ಬಾಕಿಗಳನ್ನು ತೋರಿಸಿರುವುದರಿಂದ ಸರಿಯಾದ ವಿವರವನ್ನು ನೀಡುವುದಿಲ್ಲ. | |
| 7. ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಸರ್ಕಾರದಿಂದ ಸ್ವಚ್ಛ ಗ್ರಾಮ ಯೋಜನೆಯಲ್ಲಿ ರೂ.79.99 ಲಕ್ಷಗಳನ್ನು ಆಡಳಿತಾತ್ಮಕ ವೆಚ್ಚವನ್ನು ಹಿಂಪಡೆದು, ಅದನ್ನು ಕಂಪನಿಯ ಆದಾಯವೆಂದು ಗುರುತಿಸಲಾಗಿದೆ. ಈ ಮೊತ್ತವನ್ನು ಪಡೆಯುವಾಗ ಕರ್ನಾಟಕ ಸರ್ಕಾರದಿಂದ ಯಾವುದೇ ರೀತಿಯ ಅನುಮೋದನೆಯನ್ನು ಪಡೆದಿರುವುದಿಲ್ಲ. ಮುಂದುವರೆದು ಈ ಹಣವನ್ನು ಕರ್ನಾಟಕ ಸರ್ಕಾರದಿಂದ ರೂ.79.99 ಲಕ್ಷಗಳನ್ನು ಗ್ಯಾರಂಟಿ ಕಮಿಷನ್‌ಗೆ ಅನುಗುಣವಾಗಿ ಪಾವತಿಸಿರುತ್ತದೆ. | ಕಂಪನಿಯು 2003–04 ರಿಂದ 2008–09ರ ವರೆಗೆ ರೂ.911.32ಲಕ್ಷಗಳನ್ನು ಗ್ಯಾರಂಟಿ ಕಮಿಷನ್‌ನನ್ನು ಕರ್ನಾಟಕ ಸರ್ಕಾರಕ್ಕೆ ಕೊಡಬೇಕಾಗಿತ್ತು. ಆದರೆ, ಕಂಪನಿಯು HUDCO ಸಂಸ್ಥೆಯಿಂದ ಪಡೆದ ಸಾಲವು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಪಡೆದ್ದುದಾಗಿರುವುದರಿಂದ ಗ್ಯಾರಂಟಿ ಕಮಿಷನ್ ಕೊಡುವ ಜವಾಬ್ದಾರಿ ಕಂಪನಿಯ ಮೇಲೆ ಇರುವುದಿಲ್ಲ ಮತ್ತು ಸರ್ಕಾರವು ದಿನಾಂಕ: 29/3/2010ರ ಆದೇಶದಲ್ಲಿ ಕಂಪನಯು ಕೊಡಬೇಕಾದ ಗ್ಯಾರಂಟಿ ಕಮಿಷನ್‌ನನ್ನು ಸ್ವಚ್ಛಗ್ರಾಮ ಯೋಜನೆಯಡಿಯಲ್ಲಿ ಆಡಲಿತಾತ್ಮಕ ವೆಚ್ಚಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಅದರಂತೆ ಲೆಕ್ಕ ಪುಸ್ತಕದಲ್ಲಿ ಹೊಂದಾಣಿಕೆಯನ್ನು ನಮೂದಿಸಲಾಗಿದೆ. ಆದುದರಿಂದ 2009–10ರ ಗ್ಯಾರಂಟಿ ಕಮಿಷನ್‌ನನ್ನು ಲಾಭ ಮತ್ತು ನಷ್ಟದ ಖಾತೆಯಿಂದ ಹೊರಗಿಟ್ಟು ಲೆಕ್ಕ ಪತ್ರಗಳನ್ನು ಸಿದ್ದಪಡಿಸಲಾಗಿದೆ. |
| 8. ನಿಗಮವು ಈ ಕೆಳಕಂಡ ದಾಯಿತ್ವವನ್ನು ಒದಗಿಸಿರುವುದಿಲ್ಲಾ<br>ಅ) ನಮೂನೆ 240 ರ ವಾರ್ಷಿಕ ವಹಿವಾಟಿನ ಮತ್ತು ಪ್ರಗತಿಯಲ್ಲಿನ ಕಾಮಗಾರಿಗಳ ಮೊತ್ತದ ನಡುವೆ ಇರುವ ವ್ಯತ್ಯಾದಿಂದಾಗಿ ಮೌಲ್ಯಾಧಾರಿತ ತೆರಿಗೆಯ ದಾಯಿತ್ವದ ವ್ಯತ್ಯಾಸವನ್ನು ಕಂಡುಹಿಡಿಯಲಾಗಿಲ್ಲ ಮತ್ತು ಕಲ್ಪಿಸಿರುವುದಿಲ್ಲ. (ಉಲ್ಲೇಖ:ಕಂಡಿಕೆ 16 (ಎ) ರ ಅನಸೂಚಿ 19).<br>ಆ) ಬಿಸಿಎಂ ವಿದ್ಯಾರ್ಥಿ ನಿಲಯದ ಕಾಮಗಾರಿಗಳಿಂದ ರೂ.37.68 ಲಕ್ಷಗಳಷ್ಟು ನಷ್ಟವಾಗಿರುತ್ತದೆ. (ಲಿಕ್ವಿಡೇಟೆಡ್ ಡ್ಯಾಮೇಜಸ್) (ಉಲ್ಲೇಖ: ಅನುಸೂಚಿ 19ರ ಕಂಡಿಕೆ–18).<br>ಇ) ನಿಗದಿತ ವೇಳೆಯಲ್ಲಿ ಜಬ್ಬಲ್‌ಪುರ ಯೋಜನೆಯ ಕಾಮಗಾರಿ ಪೂರ್ಣಗೊಳಿಸದಿದ್ದ ಕಾರಣದಿಂದಾಗಿ ಸಂದಾಯ ಮಾಡಿದ ರೂ.201.21 ಲಕ್ಷದಲ್ಲಿ ಇಎಂಡಿ, ಕಾರ್ಯಾಧಾರಿತ ಭದ್ರತಾ ಠೇವಣಿ ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಭದ್ರತಾ ಠೇವಣಿ, ಕಾಮಗಾರಿ ವಹಿಸಿದ ಇಲಾಖೆಯಲ್ಲಿರುವ ಹೆಚ್ಚುವರಿ ಭದ್ರತಾ ಠೇವಣಿಗಳನ್ನು ವಹಿಸಿಕೊಟ್ಟ ಪ್ರಾಧಿಕಾರ ಮುಟ್ಟುಗೋಲು ಹಾಕಿಕೊಂಡಿದೆ. | 31.3.2010ರೊಳಗೆ ವಾರ್ಷಿಕ ಸಲ್ಲಿಕೆ 240 ಅನ್ನು ಮೌಲ್ಯವರ್ಧಿತ ತೆರಿಗೆ ಪ್ರಾಧಿಕಾರಕ್ಕೆ ಸಲ್ಲಿಸಲು ಸಮಯವನ್ನು ನಿಗದಿ ಪಡಿಸಲಾಗಿದೆ. ಈ ಸಮಯಕ್ಕೆ ಲೆಕ್ಕ ಪತ್ರಗಳನ್ನು ಅಂತಿಮಗೊಳಿಸುವ ಸಂದರ್ಭದಲ್ಲಿ ಕೊಲವೊಂದು ವಿಭಾಗಗಳು ವ್ಯಾಟ್ 240ಯನ್ನು ಸಲ್ಲಿಸಿರುವುದಿಲ್ಲ. ವ್ಯಾಟ್ ಮೊತ್ತವನ್ನು ಪ್ರಾಧಿಕಾರದಲ್ಲಿ ವಾರ್ಷಿಕ ಸಲ್ಲಿಕೆ ಮಾಡಿದ ನಂತರ ಹೊಂದಾಣಿಕೆ ಮಾಡಲಾಗುವುದು. ಆದುದರಿಂದ ಈ ವ್ಯತ್ಯಾಸವನ್ನು ಗುರುತಿಸಲಾಗುವುದಿಲ್ಲ.<br>ಪ್ರಸಕ್ತ ಸಾಲಿನಲ್ಲಿ BCM ಇಲಾಖೆಯಿಂದ ರೂ.145.03 ಲಕ್ಷಗಳು ಬಾಕಿ ಇರುವ ಹಣವನ್ನು ವಿಶ್ವಾಸದ ಮೇರೆಗೆ ಕಂಪನಿಯು ಪಡೆದಿರುತ್ತದೆ. ರೂ.37.68 ಲಕ್ಷಗಳು ಬಾಕಿ ಇರುವ ಹಣವನ್ನು ಕಂಪನಿಯು ಒದಗಿಸುವುದಿಲ್ಲ.<br>NVDAಗೆ ವಹಿಸಿದ ಕಾಮಗಾರಿಗಳನ್ನು ನಿಗದಿತ ಸಮಯಕ್ಕೆ ಪೂರ್ಣಗೊಳಿಸದೆ ಇರುವುದರಿಂದ EMD |

| | | |
|---|---|---|
| | (ಉಲ್ಲೇಖ: ಅನುಸೂಚಿ19ರ ಕಂಡಿಕೆ-19). ಮುಂದುವರೆದು ರೂ.511.51 ಲಕ್ಷಗಳ ಮುಂಗಡ ಹಣವನ್ನು ಗುತ್ತಿಗೆದಾರರು ಈ ವಿಭಾಗದ ಕಾಮಗಾರಿಗಳನ್ನು ನಿರ್ವಹಿಸಲು ಈ ಹಣವನ್ನು ವಿಸ್ತರಿಸಿದ್ದಾರೆ. ಕಾಮಗಾರಿಯು ಸ್ಥಗಿತಗೊಂಡು ನಷ್ಟ ಉಂಟಾಗಿರುತ್ತದೆ.<br>ಆದುದರಿಂದ ಪ್ರಸಕ್ತ ಸಾಲಿನ ದಾಯಿತ್ವ ಲಾಭಾಂಶವು ಖಚಿತವಾಗಿಲ್ಲ. ಈ ಮೇಲಿನ ಕಂಡಿಕೆ 3 ಮತ್ತು 11 ರಂತೆ ಕಡಿಮೆ ಅವಕಾಶ ಮತ್ತು ಹೆಚ್ಚಿನ ಆದಾಯವನ್ನು ಗುರುತಿಸಿ ಪಟ್ಟಿ ಮಾಡಿದೆ. | ಮತ್ತು SD ಯು ರೂ.201.21 ಲಕ್ಷಗಳನ್ನು ಮುಟ್ಟುಗೋಲು ಹಾಕಲಾಗಿದೆ. ಈ ವಿಷಯವನ್ನು ಮಧ್ಯಸ್ಥಿಕೆ ಮಾಡಲು ವಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮಧ್ಯಸ್ಥಿಕೆಯಿಂದ ಅವಕಾಶ ಮಾಡುವುದು.<br><br>ನಂತರ ಅಧಿಕಾರಿಗಳ ನಿರಂತರ ಅನುಸರಣೆಯನ್ನು ಮಾಡಿ ಲೆಕ್ಕ ಪತ್ರಗಳ ಜೊತೆ ಅಂತಿಮ ಅಳತೆ ಪಡೆದಿರುತ್ತದೆ. ಯೋಜನಾಧಿಕಾರಿಗಳು ಲೆಕ್ಕ ಪತ್ರಗಳನ್ನು ಪಡೆದ ನಂತರ, ಪರಿಶೀಲಿಸಿ ಮುಂಗಡ ಹಣಕ್ಕೆ ಅನುಗುಣವಾಗಿ ಹೊಂದಾಣಿಕ ಮಾಡಲಾಗುವುದು. ಅಂತಿಮ ಬಿಲ್ಲುಗಳು ಇತ್ಯರ್ಥಗೊಂಡ ನಂತರ ಅವಶ್ಯಕತೆ ಇದ್ದರೆ ಲೆಕ್ಕ ಪತ್ರದಲ್ಲಿ ವ್ಯವಸ್ಥೆ ಮಾಡಲಾಗುವುದು. |
| 9. | ಕಂಪನಿಯ ವಿರುದ್ಧವಾಗಿ 76 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತದೆ. ಈ ಪ್ರಕರಣಗಳಿಗೆ ಸಂಬಂಧಪಟ್ಟ ಮೊತ್ತದ ಮತ್ತು ದಾಯಿತ್ವದ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ. ಈ ಪ್ರಕರಣಗಳು ಕೈ ಬಿಟ್ಟ ಸಂದರ್ಭದಲ್ಲಿ ಇದರಿಂದ ಯಾವುದೇ ರೀತಿಯ ಪರಿಣಾಮ ಉಂಟಾಗುವುದಿಲ್ಲ. ಇದರ ಪರಿಣಾಮವಾಗಿ ಸಾದಿಲ್ವಾರು ದಾಯಿತ್ವಗಳು ಲೆಕ್ಕ ಪತ್ರಗಳ ಟಿಪ್ಪಣಿಯಲ್ಲಿ ಉಳಿದಿರುತ್ತದೆ. | ಸೇವಾ ವಿಷಯಕ್ಕೆ ಸಂಬಂಧಿಸಿದಂತೆ ಕಂಪನಿಯ ವಿರುದ್ಧ ಹೆಚ್ಚಿನ ಪ್ರಕರಣಗಳನ್ನು ನೌಕರರು ಹೂಡಿರುತ್ತಾರೆ. ಸಂಬಂಧಪಟ್ಟ ನ್ಯಾಯಾಲಯಗಳಲ್ಲಿ ಪ್ರಕರಣಗಳು ತೀರ್ಮಾನವಾಗಿರುತ್ತದೆ. ದಾಯಿತ್ವವನ್ನು ಕಂಪನಿಯು ಗುರುತಿಸಲಾಗಿರುವುದಿಲ್ಲ. ಕಂಪನಿಯ ಪ್ರಮಾಣಕ್ಕೆ ಹೋಲಿಸಿದಾಗ ದಾಯಿತ್ವದ ಪ್ರಮಾಣ ಅತ್ಯಲ್ಪವಾಗಿರುತ್ತದೆ. |
| 10. | 31.3.2010ರಂದು ಇದ್ದಂತೆ, ಕೆಲಸ ಬಾಕಿ ಇರುವ ಹೊಂದಾಣಿಕೆಗಳ ಮೌಲ್ಯ 728.08 ಕೋಟಿ ರೂಪಾಯಿ ಮತ್ತು ಈ ಮೊತ್ತವನ್ನು ಚಾಲ್ತಿ ಸ್ವತ್ತುಗಳಲ್ಲಿ ಸೇರಿಸಲಾಗಿದೆ. 31.3.2010ರಂದು ಇದ್ದಂತೆ ಕೆಲಸ ವಹಿಸಿರುವ ಏಜೆನ್ಸಿಗಳಿಂದ ಬಾಕಿ ಇರುವ ಮೊತ್ತ 1026.29 ಕೋಟಿ ರೂಪಾಯಿ ಮೊತ್ತವನ್ನು ಚಾಲ್ತಿ ಹೊಣೆಗಾರಿಕೆಗಳಲ್ಲಿ ಸೇರಿಸಲಾಗಿದೆ. ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕರಿಸಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಗ್ರಾಹಕವಾರು ಅನುಸೂಚಿಗಳ ಹೊಂದಾಣಿಕೆಯಾಗಬೇಕಿರುತ್ತದೆ. ಗ್ರಾಹಕವಾರು ಅನುಸೂಚಿಗಳಿಲ್ಲದೆ, ಜಮಾಖರ್ಚುಪಟ್ಟಿಯಲ್ಲಿ ತೋರಿಸಿರುವ ಬಾಕಿಯನ್ನು ಪರಿಶೀಲಿಸಲಾಗುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು/ ಕಾಲಕಾಲಕ್ಕೆ ಕೆಲಸ ವಹಿಸುವ ಏಜೆನ್ಸಿಗಳಿಗೆ ಒಪ್ಪಿಸಿದ್ದರೂ, ಆನುಷಂಗಿಕ ಹೊಂದಾಣಿಕೆಗಳನ್ನು ಲೆಕ್ಕಪುಸ್ತಕಗಳಲ್ಲಿ ನಮೂದಿಸಿಲ್ಲ. | ಗ್ರಾಹಕವಾರು ಅನುಸೂಚಿಗಳು ಹೊಂದಾಣಿಕೆಗೆ ಬಾಕಿಯಿರುವ ಕಾಮಗಾರಿಗಳ 728.08 ಕೋಟಿ ರೂಪಾಯಿಗಳಿಗಾಗಿ ಹಾಗೂ ಕೆಲಸ ವಹಿಸುವ ಏಜೆನ್ಸಿಗಳಿಂದ ಸ್ವೀಕೃತವಾದ ಮೊತ್ತವು ರೂ.1026.29 ಕೋಟಿ ಕೇಂದ್ರ ಕಛೇರಿಯಲ್ಲಿ ಲಭ್ಯವಿರುತ್ತದೆ. ಎಂದರೆ ಮರುಹೊಂದಾಣಿಕೆಯ ಅಡಿಯಲ್ಲಿ 31.03.2010ರಂದು ಇದ್ದಂತೆ ಹೊಂದಾಣಿಕೆ ಮಾಡಬೇಕಾದ ಕಾಮಗಾರಿಗಳ ಬಗೆಗಿನ, ಅನುಸೂಚಿಗಳು ಕಂಪನಿಯಲ್ಲಿ ಕೂಡಲೇ ದೊರಕುತ್ತವೆ. ಅದನ್ನು ಮುಂಬರುವ ವರ್ಷಗಳಲ್ಲಿ ಹೊಂದಾಣಿಕೆ ಮಾಡಲಾಗುವುದು.<br>ಹಿಂದಿನ ವರ್ಷದಲ್ಲಿ ನಿರ್ವಹಿಸಲಾದ ರೂ.380.08 ಕೋಟಿ ರೂಪಾಯಿಗಳಿಗೆ ಅನುಗುಣವಾಗಿ ಕಂಪನಿಯು 2009-10 ರಲ್ಲಿ ನಿರ್ವಹಿಸಿದ ಕಾಮಗಾರಿಗಳ ಮೊತ್ತ ರೂ.226.10 ಕೋಟಿ ರೂ.ಗಳಷ್ಟನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಮುಂಬರುವ ವರ್ಷಗಳಲ್ಲಿ ಬಾಕಿ ಇರುವ ಎಲ್ಲಾ ಪ್ರಗತಿಯಲ್ಲಿರುವ ಕಾಮಗಾರಿಗಳ ಹೊಂದಾಣಿಕೆಯನ್ನು ಪೂರ್ಣಗೊಳಿಸುವ ವಿಶ್ವಾಸವನ್ನು ಕಂಪನಿಯು ಹೊಂದಿರುತ್ತದೆ. |